

# ‘ಗಿನ್ನೆಸ್‌ಗೆ ನಾಡಗೀತೆ ಸೇರಿಸುವ ಪ್ರಯತ್ನ’

ಡಾ. ಶಮಿತಾ ಮಲ್ನಾಡ್ ಗಾಯಕಿ, ಸಂಗೀತ ನಿರ್ದೇಶಕಿ, ನಿರೂಪಕಿ; ಮೇಲಾಗಿ ದಂತ ವೈದ್ಯೆ. ಮೊನ್ನೆ ಮೊನ್ನೆ ಬರಗೂರು ರಾಮಚಂದ್ರಪ್ಪ ಅವರ ‘ಬೆಕ್ಕು’ ಸಿನಿಮಾದ ಹಿನ್ನೆಲೆ ಗಾಯನಕ್ಕೆ ರಾಜ್ಯ, ಫಿಲಂ ಫೇರ್ ಪ್ರಶಸ್ತಿ ಪಡೆದವರು. ಕನ್ನಡ, ಹಿಂದಿ, ತೆಲುಗು, ತಮಿಳು.. ಹೀಗೆ ಒಟ್ಟು ಎಂಟು ಭಾಷೆಗಳಲ್ಲಿ ಹಾಡುವ ಈ ‘ಹಾಡು ಹಕ್ಕಿ’ ಭಾವಗೀತೆ, ಭಕ್ತಿಗೀತೆ, ಚಿತ್ರಗೀತೆ, ಜಾನಪದ ಗೀತೆ.. ಲಘು ಸಂಗೀತದ ಎಲ್ಲ ಪ್ರಕಾರಗಳಲ್ಲಿ ಹಾಡಿ ಕೇಳುಗರಿಗೆ ಮೋಡಿ ಮಾಡಿದವರು. ಸಿನಿಮಾ ಸಂಗೀತ ನಿರ್ದೇಶನಕ್ಕೂ ಕೈಹಾಕಿರುವ ಶಮಿತಾ, ವೃತ್ತಿಯಲ್ಲಿ ದಂತವೈದ್ಯೆ. ಆದರೆ ಪ್ರವೃತ್ತಿಯಾಗಿ, ಹವ್ಯಾಸವಾಗಿ ತೆಗೆದುಕೊಂಡಿರುವ ಗಾಯನ ಇವರನ್ನು ಯಶಸ್ಸಿನತ್ತ ಕೊಂಡೊಯ್ದಿದೆ. ತಮ್ಮ ಹಾಡು, ನಿರೂಪಣೆ, ನಿರ್ದೇಶನ, ವೃತ್ತಿ ಕುರಿತಾಗಿ ಡಾ. ಶಮಿತಾ ‘ಸುಧಾ’ದೊಂದಿಗೆ ಮುಕ್ತವಾಗಿ ಮಾತನಾಡಿದ್ದಾರೆ.

**■ ಉಮಾ ಅನಂತ್**

■ ಚಿತ್ರಗಳು: ವಿಶ್ವನಾಥ್ ಸುವರ್ಣ

***▸ ಕಲಾತ್ಮಕ ಚಿತ್ರವೊಂದಕ್ಕೆ ಮೊದಲ ಬಾರಿಗೆ ಸಂಗೀತ ನಿರ್ದೇಶನ ಮಾಡಿ, ಹಾಡಿದ್ದೀರಿ, ಪ್ರಶಸ್ತಿಯೂ ಬಂತು. ಏನನ್ನಿಸುತ್ತದೆ?***

ಒಂದು ದಿನ ಬರಗೂರು ರಾಮಚಂದ್ರಪ್ಪ ಅವರು ಫೋನ್ ಮಾಡಿ ಸ್ಟುಡಿಯೋಗೆ ಬರುವಂತೆ ಹೇಳಿದರು. ಹಾಗೆ ಹೋದಾಗ ಅಲ್ಲಿ ಸಿನಿಮಾದ ಒಂದು ಹಾಡಿಗೆ ಸಂಗೀತ ನಿರ್ದೇಶನ ಮಾಡಬೇಕು ಎಂದರು. ನನಗೆ ನಿಜಕ್ಕೂ ಶಾಕ್ ಆಯ್ತು. ಅಚ್ಚರಿ ಆಯ್ತು, ಖುಷಿ, ಭಯ ಎಲ್ಲ ಸಂವೇದನೆಗಳೂ ಒಮ್ಮೆಲೆ ಆಯ್ತು. ನಾನು ಎಷ್ಟೋ ಸಿನಿಮಾ ಹಾಡುಗಳನ್ನು ಹಾಡಿದ್ದರೂ ‘ನಿಧಾನ ನಡೆ’ಯ ಮೆಲೊಡಿ ಸಾಂಗ್ ಹಾಡುವ ಅವಕಾಶ ಸಿಕ್ಕಿರಲಿಲ್ಲ. ಮೇಲಾಗಿ ಕಲಾತ್ಮಕ ಸಿನಿಮಾದಲ್ಲಿ ಮಾತು ಹೆಚ್ಚು ಇರುವುದಿಲ್ಲ.

ಬೆಕ್ಕು ಚಿತ್ರದಲ್ಲಿ ಒಂದೇ ಒಂದು ಹಾಡಿದೆ. ‘ತಳಮಳದ ಮಳೆಯಲ್ಲಿ ಮನಸುಗಳು ತೋಯುತಿವೆ; ತಳಮಳದ ಕರುಳಿನಲಿ ಕನಸುಗಳು ಕರಗುತಿದೆ..’ ಬರಗೂರು ರಾಮಚಂದ್ರಪ್ಪ ಅವರು ಬರೆದಿದ್ದಾರೆ. ಮೌನವೇ ಇರುವಾಗ ಹಿನ್ನೆಲೆಯಲ್ಲಿ ಸಂಗೀತ ಕೊಡುವುದು, ಹಾಡುವುದು ಸವಾಲೇ ಆಗಿತ್ತು. ಹೆಣ್ಣಿನ ಒಳಮನಸ್ಸಿನ ತುಮುಲ, ತಲ್ಲಣ, ತಳಮಳಗಳನ್ನು ಸಂಗೀತದ ಮೂಲಕ ಕಟ್ಟಿಕೊಡಬೇಕು. ಇಂಥ ಸನ್ನಿವೇಶ ಇರುವ ಕಥೆಯಾದ್ರಿಂದ ಸಂಗೀತ ನೀಡಲು ಬಹಳ ಪರಿಶ್ರಮ ಬೇಕಾಗಿತ್ತು. ಸಾಕಷ್ಟು ಕಷ್ಟಪಟ್ಟು ಈ ಕೆಲಸ ಮಾಡಿದೆ. ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿತು ಎಂಬ ತೃಪ್ತಿ ನನಗಿದೆ.

***▸ ಸಂಗೀತವನ್ನು ಗಿನ್ನೆಸ್ ದಾಖಲೆಯತ್ತ ಕೊಂಡೊಯ್ಯುವ ಹೊಸ ಪ್ರಯತ್ನ ಮಾಡುತ್ತಿದ್ದೀರಂತೆ. ಇದಕ್ಕೆ ನಿಮ್ಮದೇ ನೇತೃತ್ವ, ಪರಿಕಲ್ಪನೆ, ನಿರ್ಮಾಣ ಎಲ್ಲವೂ ಇದೆಯಂತೆ..?***

ಹೌದು. 2006ರಲ್ಲಿ ಬಾಲಿವುಡ್ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರು ಹತ್ತು ಕಲಾವಿದರನ್ನು ಒಳಗೊಂಡ ರಾಷ್ಟ್ರಗೀತೆಯನ್ನು ವಿಭಿನ್ನವಾಗಿ ಪ್ರಸ್ತುತಪಡಿಸಿದ್ದರು. ಅಲ್ಲಿಂದಲೇ ಕನ್ನಡದಲ್ಲೂ ಇದೇ ರೀತಿಯ ಒಂದು ಹೊಸ ಪ್ರಯತ್ನ ಯಾಕೆ ಮಾಡಬಾರದು ಎಂಬ ಯೋಚನೆ ಇತ್ತು. ಈ ಕನಸನ್ನು ಸಾಕಾರಗೊಳಿಸಲು ಸಾಕಷ್ಟು ಪ್ರಯತ್ನ ಪಟ್ಟೆ. ಇದರ ಪ್ರತಿಫಲವೇ ಸುಗಮ ಸಂಗೀತ ಮತ್ತು ಕನ್ನಡ ಚಲನಚಿತ್ರ ಹಿನ್ನೆಲೆ